# ಕಾವ್ಯ ಸಾಹಿತ್ಯದಲ್ಲಿ ಪರಿಸರ ಮತ್ತು ಹಸಿರು ಚಿಂತನೆ

ರೆಹಮಾನ್ ಆ.

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಕೆ.ಎಲ್.ಇ ಸಂಸ್ಥೆಯ ಶ್ರೀ ಮೃತ್ಯುಂಜಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಧಾರವಾಡ

DOI: https://doi.org/10.5281/zenodo.18784818

## ABSTRACT:

ಸೃಷ್ಟಿಯ ದೃಷ್ಟಿಯೇ ಬ್ರಹ್ಮಾಂಡವಾಗಿದೆ. ಭೂಮಿಯಲ್ಲಿ ಜೀವಿಸಲು ಯೋಗ್ಯವಾದ ಸುವ್ಯವಸ್ಥೆಯಿದೆ. ಎಲ್ಲ ಜೀವ ಸಂಕುಲಗಳು ಬದುಕಿ ಬಾಳಲು ಸೃಷ್ಟಿಯ ಅದ್ಭುತವಾದ ಕಾರ್ಯವಾಗಿದೆ. ಭೂಮಿಯಲ್ಲಿ ನೀರು, ಅಗ್ನಿ, ವಾಯು, ಪ್ರಾಣಿ, ಪಕ್ಷಿ, ಸಸ್ಯಗಳು ಸಹ ಬದುಕುತ್ತಿವೆ. ಮನುಷ್ಯರು ಕೂಡಾ ಜೀವಿಸುತ್ತಿದ್ದಾರೆ. ಪರಿಸರದಲ್ಲಿನ ಗುಡ್ಡ, ಬೆಟ್ಟ, ಅರಣ್ಯ ಪ್ರದೇಶದಲ್ಲಿನ ಗಿಡಮರಗಳು, ವನ್ಯಜೀವಿಗಳು, ಕೆರೆ, ನದಿ, ವಾಸಿಸಲು ಇರುವ ಅಗತ್ಯತೆಗಳು ಕಂಡು ಬರುತ್ತವೆ. ಹೀಗೆ ನಾಗರಿಕತೆಯ ಸೃಷ್ಟಿ, ಸೌಲಭ್ಯಗಳು, ಅನುಕೂಲಗಳು ಕಾಣಬಹುದಾಗಿದೆ. ಕೃಷಿ ಉತ್ಪನ್ನಗಳ ವ್ಯವಸಾಯ ರೈತನ ಜೀವನದ ಸಾಧನೆಯೇ ದೇಶದ ಹೆಮ್ಮೆಯತನವಾದ ವಿಷಯವಾಗಿದೆ. ಔಷಧಿಗಳು ಹೊಂದಿರುವ ಗಿಡಮರಗಳು, ಗದ್ದೆಯಲ್ಲಿನ ಬೆಳೆಗಳು, ವೈಜ್ಞಾನಿಕ ಸಂಶೋಧನೆಯ ಫಲಿತಗಳು ಸಾರ್ವಜನಿಕರಿಗೆ ಅನುಕೂಲಗಳಾಗಿವೆ. ಹಸಿರು ಪರಿಸರದ ಮುಂಗಾರು ಮಳೆಯ ವಸಂತ ಕಾಲದ ರಮಣೀಯತೆ ಕಾಣಬಹುದಾಗಿದೆ.

ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿಯೂ ಸಹ ಪರಿಸರ, ನಿಸರ್ಗ, ಹಸಿರಿನ ವರ್ಣನೆ, ಬಣ್ಣನೆ, ಮಲೆನಾಡು, ಕರಾವಳಿಯ ತೀರದ ಸಮುದ್ರದ ಅನುಭವಗಳು ಉಲ್ಲೇಖಗೊಂಡಿವೆ. ಅಷ್ಟೇ ಅಲ್ಲ ಹಳಗನ್ನಡ, ನಡುಗನ್ನಡ, ಹೊಸಗನ್ನಡದಲ್ಲಿಯೂ ಸಹ ಪರಿಸರ ಹಸಿರು ಚಿಂತನೆಗಳು ರಚನೆಗೊಂಡಿರುವ ವಿಷಯಗಳು ಅಧ್ಯಯನದಿಂದ ತಿಳಿಯಬಹುದಾಗಿದೆ. ಭೂಮಿಯಲ್ಲಿನ ಭೌಗೋಳಿಕ ಖನಿಜ ಸಂಪನ್ಮೂಲಗಳು ಒಳಗೂ ಮತ್ತು ಹೊರಗೂ ಇರುವುದನ್ನು ಕಾಣಬಹುದಾಗಿದೆ. ವಿಜ್ಞಾನ, ವೈಜ್ಞಾನಿಕ ಚಿಂತನೆಗಳು, ವೈದ್ಯಕೀಯ ಮಾರುಕಟ್ಟೆಯ ಉತ್ಪನ್ನಗಳು, ತರಕಾರಿ, ಸಸ್ಯಗಳು, ನೀರು, ವಾಯುವಿನ ಅಗತ್ಯತೆ ತಿಳಿಸುತ್ತವೆ. ಬದುಕಲು ಸಕಲ ಸೌಲಭ್ಯಗಳು ಪರಿಸರದ ಕೊಡುಗೆಯಾಗಿದೆ. ಪರಿಸರ, ಹಸಿರು ಚಿಂತನೆಗೆ ಸಂಬಂಧಿಸಿದಂತೆ, ಹಲವಾರು ಕೃತಿಗಳು ರಚನೆಗೊಂಡಿವೆ. ಸಮಸ್ಯೆಗಳು ಎದುರಾದಾಗ ಪರಿಹಾರಗಳು ಕಂಡು ಹಿಡಿಯುವ ಪ್ರಯತ್ನಗಳಿವೆ.

ಬಿ.ಜಿ.ಎಲ್. ಸ್ವಾಮಿಯವರ 'ಹಸಿರು ಹೊನ್ನು', ಕೆ.ಎಸ್.ನಿಸಾರ್ ಅಹಮ್ಮದರ 'ನಿತ್ಯೋತ್ಸವ', ನಾರಾಯಣ ಶೇವಿರೆ– 'ಪರಿಸರ ಪರ', ಡಾ.ಎಚ್. ಆರ್.ಕೃಷ್ಣಮೂರ್ತಿ– 'ಪರಿಸರ ಅಧ್ಯಯನ', ಪ್ರೊ.ಕೆ.ಬೈರಪ್ಪ– 'ಪರಿಸರ ಪ್ರಜ್ಞೆ', ಪೂರ್ಣಚಂದ್ರ ತೇಜಸ್ವಿಯವರ 'ಪರಿಸರದ ಕಥೆ', ಮುಂತಾದ ಕೃತಿಗಳನ್ನು ಸಹ ಕಾಣಬಹುದಾಗಿದೆ. ಕರ್ನಾಟಕದಲ್ಲಿ ಅಪೂರ್ವ ಪಶ್ಚಿಮಘಟ್ಟ, ಕಾಡು, ತೋಟ, ಕಾಡು ಹಣ್ಣುಗಳು ಇತ್ಯಾದಿಗಳು ಕಾಣಬಹುದಾಗಿದೆ. ಪರಿಸರದಲ್ಲಿನ ಹಸಿರು ಬೆಳೆಗಳು, ಆರ್ಥಿಕ ಸ್ಥಿತಿ, ಉತ್ಪನ್ನಗಳು, ಮಾರುಕಟ್ಟೆ, ಜಾನುವಾರುಗಳು, ವಿಜ್ಞಾನ, ಸಂಶೋಧನೆ, ಹಲವಾರು ವಲಯಗಳನ್ನು ವಿಸ್ತಾರವನ್ನು ಪಡೆದುಕೊಂಡಿದೆ.

ಕನ್ನಡ ಸಾಹಿತ್ಯಲೋಕದಲ್ಲಿ ಪರಿಸರ, ಹಸಿರು ವಿಷಯ ವಸ್ತುವಾಗಿ ಜೀವಂತ ನಿದರ್ಶನಗಳು ಕಂಡು ಬರುತ್ತವೆ. ಒಟ್ಟಾರೆಯಾಗಿ ಮಾನವ ಪರಿಸರದ ಕೂಸು; ಸಂರಕ್ಷಣೆ ನಮ್ಮೆಲ್ಲರ ಹೊಣೆಯಾಗಿದೆ. ನಿಸರ್ಗದ ಲಾಲನೆ ಪಾಲನೆಯನ್ನು ಪ್ರತಿಯೊಬ್ಬರು ಮಾಡಬೇಕು. ಪರಿಸರವನ್ನು ಉಳಿಸಿ ಬೆಳೆಸಬೇಕಾಗಿದೆ.

**KEYWORDS:**

ಬ್ರಹ್ಮಾಂಡ, ಭೂಮಿ, ಪರಿಸರ, ಹಸಿರು, ನೀರು, ವಾಯು, ಖನಿಜ ಸಂಪನ್ಮೂಲ.

**ಪ್ರಸ್ತಾವನೆ:**

ಸೌರಮಂಡಲದಲ್ಲಿ ವಿವಿಧ ಗ್ರಹಗಳಿವೆ ಅದರಲ್ಲಿ ಭೂಮಿಯು ಸಹ ಒಂದು ಗ್ರಹವಾಗಿದೆ. ಸಕಲ ಜೀವ ಸಂಕುಲವು ಬದುಕಿ ಬಾಳಲು ಯೋಗ್ಯವಾದ ಸ್ಥಳವಾಗಿದೆ. ನೀರು, ವಾಯು, ಅಗ್ನಿ, ಖನಿಜ ಸಂಪನ್ಮೂಲಗಳು, ಸಸ್ಯಗಳು, ಪ್ರಾಣಿಗಳು, ಮನುಜರು, ಕ್ರಿಮಿಕೀಟಗಳು, ಸೂಕ್ಷ್ಮಜೀವಿಗಳು, ಇನ್ನೂ ಮುಂತಾದವುಗಳು ಈ ಭೂಮಂಡಲದಲ್ಲಿ ಒಳಗೊಂಡಿವೆ. ಅರಣ್ಯ ಪ್ರದೇಶದಲ್ಲಿನ ಗಿಡಮರಗಳು ಔಷಧಿಯ ಗುಣಾಂಶವನ್ನು ಹೊಂದಿವೆ. ಕೃಷಿ ವ್ಯವಸ್ಥೆಯು ಭಾರತದಲ್ಲಿ ಪ್ರಧಾನವಾದ ವ್ಯವಸಾಯವಾಗಿದೆ. ಅನ್ನದಾತ ರೈತನು ದೇಶದ ಬೆನ್ನೆಲುವಾಗಿದ್ದಾನೆ. ಭೌಗೋಳಿಕ ಲಕ್ಷಣಗಳು ಸಹ ಪರಿಸರದ ಭಾಗವೇ ಆಗಿವೆ. ಪರಿಸರ ಎಂದರೇನು? ಅದರ ಅರ್ಥ, ವ್ಯಾಪ್ತಿ, ಸ್ವರೂಪ, ಮಹತ್ವ, ವಿವಿಧ ವಿದ್ವಾಂಸ ವ್ಯಾಖ್ಯಾನಗಳು ಸಹ ಕಾಣಬಹುದಾಗಿದೆ.

ಹೀಗೆ ಪರಿಸರ ಮತ್ತು ಹಸಿರು ಚಿಂತನೆಯನ್ನು ನಾವು ಆಳವಾದ ಅಧ್ಯಯನದ ಮುಖಾಂತರವೂ ತಿಳಿಯಬಹುದಾಗಿದೆ. ಇಲ್ಲಿ ಹಲವಾರು ರಹಸ್ಯಮಯವಾದ, ವಿಸ್ಮಯವಾದ, ಅದ್ಭುತವಾದ, ರೋಮಾಂಚನವಾದ ವಿಷಯ ವಸ್ತುಗಳನ್ನು ಹೊಂದಿರುವುದು ತಿಳಿಯಬಹುದಾಗಿದೆ. ಕರ್ನಾಟಕ ಪ್ರಾದೇಶಿಕತೆಯನ್ನು ಕಂಡಾಗ ಬಯಲುಸೀಮೆ, ಮಲೆನಾಡು, ಕರಾವಳಿ ಪ್ರದೇಶ ಎಂದು ಮೂರು ಭಾಗವಾಗಿ ವಿಂಗಡಿಸಿರುವುದು ಕಾಣಬಹುದಾಗಿದೆ. ಪ್ರಾಚೀನವಾದ ಇತಿಹಾಸ, ಪರಂಪರೆ, ಸಾಹಿತ್ಯದ ಕೊಡುಗೆ, ಸಂಸ್ಕೃತಿಯನ್ನು ಕಾಣಬಹುದಾಗಿದೆ. ಪರಿಸರದ ಸಂರಕ್ಷಣೆ, ಕೆರೆ, ಬಾವಿ, ಹಳ್ಳಗಳು, ಆಣೆಕಟ್ಟುಗಳು, ಕೃಷಿ ಉತ್ಪನ್ನಗಳು, ಸಲಕರಣೆಗಳು ಭೂಮಿಯಲ್ಲಿ ಹಸಿರಾಗುವಂತೆ ಕೈಗೊಳ್ಳುವ ಕಾರ್ಯಕ್ರಮಗಳು ಆಗಿವೆ.

ಡಾ.ಚಂದ್ರಮಾ ಎಸ್.ಕಣಗಲಿಯವರ ಕಾವ್ಯವನ್ನು ನೋಡಬಹುದಾಗಿದೆ. "ನಿಸರ್ಗ–ಕಂದು, ಬೂದು, ಬಿಳಿ, ಕಪ್ಪು, ಹಕ್ಕಿಗಳು, ಎಲ್ಲೆಂದರಲ್ಲಿ ಹಾಕಿದ ಕಾಳು ತಿಂದು ಬಂದು, ಇಟ್ಟಿರೋ ನೀರು ಕುಡಿದು ಹಾರಿ ಹೋಗುವ ಒಂದು, ಎರಡು, ಮೂರು, ಅನೇಕ ಗುಂಪು. ಅವುಗಳ ಮಧ್ಯೆ ನುಗ್ಗುವ ಕೀಚಲು ದನಿಯಲಿ, ಬಾಲವ ಹಿಗ್ಗಿಸಿ, ಹೆದರಿಸಿ, ಓಡಿಸಿ ತಾನೇ ಎಲ್ಲವ ತಿನ್ನಲು ಬಯಸುವ ಅಳಿಲುಗಳೆರಡು.

ನೇಸರ ಮುಳುಗಿ ಕತ್ತಲು ಹರಡುವ ವೇಳೆ ಬೂದು-ಬಿಳಿ ವರ್ಣದ, ಬಟ್ಟಲು ಕಂಗಳ, ಬೇಟೆ ಹುಡುಕುವ ಗೂಬೆಗಳೆರಡು".[1] ಹೀಗೆ ಪರಿಸರದಲ್ಲಿನ ನೀರು, ಗಿಡಮರಗಳು, ಪಕ್ಷಿಗಳು, ಸೂರ್ಯ, ಚಂದ್ರರು, ಪ್ರಾಣಿಗಳು ಇತ್ಯಾದಿಗಳು ಜೀವಿಸುವ ಪವಿತ್ರ ಪುಣ್ಯಭೂಮಿಯಾಗಿದೆ.

**ಪ್ರಕೃತಿಯ ಸೊಬಗಿನ ಭಿನ್ನಾಣ:**

ಪರಿಸರದಲ್ಲಿ ಸೊಬಗಿನ ಮಳೆ ಬಂತೆಂದರೆ ಕವಿ ಶ್ರೀಶೈಲ ಬಿರಾದಾರ ಅವರ ಊರಿಗೆ ಸಾಟಿ ಇಲ್ಲ ಎಂದು ಹೇಳುವರು. ಅದರ ಮುಂದೆ ಬಂದು ನಿಲ್ಲುವರು, ಸುತ್ತಮುತ್ತ ಇರುವ ಗುಡ್ಡಬೆಟ್ಟ, ರೋಮಾಂಚನದ ತುಂಬು ಹಸಿರು ಕುಪ್ಪಸ ತೊಟ್ಟು ನಿಂತ ಬಾಳೆಯ ವನದಂತೆ ಎಂದು ಹೇಳುತ್ತಾ ಇದರ ಸೌಂದರ್ಯ ಹಬ್ಬದ ವನವಾಗಿದೆ. ಈ ಸೌಂದರ್ಯದಲ್ಲಿ ಮುತ್ತಿಟ್ಟ ಹಾಗೆ ಮನೆ, ಮಂದಿರಗಳು ಪರಿಸರದ ಪ್ರದೇಶವೆಲ್ಲ ಇರುವುದು ಕಾಣಬಹುದು ಎನ್ನುತ್ತಾರೆ. "ಹೊತ್ತು ಉದಿಸಿ, ಮುಂಜಾವಿನ ಗಳಿಗೆ ನೋಡುವುದು ಅತಿ ಸುಂದರ, ಮುಳುಗುವಾಗ ಅತಿಮಧುರ ಬೆಟ್ಟದ ಸುಳಿಯಲ್ಲಿ ಝುಳಝುಳಿಸುತ್ತ ಬಂದ ಜಲವಹುದು ಅಮೃತ, ಅದು ಹರಿದು ಕೆರೆಯ ಸೇರುತ ಎಂಥ ವಿಹಂಗಮ ನೋಟ ಈ ನನ್ನ ಊರು, ನೆಲೆಸಲು, ಕಲಿಯಲು, ಬೆಳೆಯಲು, ಆಸರೆಯ ಕೊಟ್ಟ ತವರು, ಪ್ರಕೃತಿಗೆ ಮೈಮನ ಸೋಲದ ಜೀವಿ ಆವುದೀ ನೆಲದಲ್ಲಿ, ಆದ್ಯತೆ ಸೈ ಎನ್ನದ ಮನವು, ಕಲ್ಲು ಬಂಡೆಯಂತೆ ಜೀವನ್ಮೃತ"[2] ಎಂದು ಕವಿಯು ಊರಿನ ಪರಿಸರದ ಚಿತ್ರಣವನ್ನು ತಿಳಿಸುವರು.

**ಮುಂಗಾರು ಮೋಡ:**

ವಸಂತಕಾಲದ ಋತುವಿನಲ್ಲಿ ಮುಂಗಾರು ಮಳೆಯ ಸುಳಿಯಲ್ಲಿ ಮುಂಗಾರು ಮೋಡ ಬಂದಿತು. ಸುತ್ತಮುತ್ತಲು ನೆತ್ತಿಯ ಮೇಲೆ ನೆರಳನು ಸೂಸುತ ನೇಸರ ಕಾಣದ ಮರೆಯಾದನು ಮೋಡಕೆ ಮೋಡ ಮುತ್ತಿನ ಹೊನಲು ಬಂದಿತು ಎಂದು ಕವಿ ಕೆ.ಎಸ್.ಚಿದಾನಂದ ಅವರು ವಿವರಿಸುತ್ತಾರೆ. ರೈತನ ಮೊಗದಲ್ಲಿ ನಗುವನ್ನು ಹೊಮ್ಮಿಸಿ ಮನೆಯಲ್ಲಿನ ಹಬ್ಬದ ಸಡಗರ ಮುಂಗಾರು ಮೋಡ ಬಂತೆಂದರೆ ಎಂಬ ಸಂದೇಶವಿದೆ. ಭೂಮಿಯಲ್ಲಿ ನೇಗಿಲು ಹಿಡಿದು ರೈತನು ಎತ್ತನ್ನು ನೊಗ ಕೊಡುವ ಅವಸರದಿಂದ ಬಿತ್ತಲು ಸಾಗುವನು. ಹೀಗೆ ಪರಿಸರದ ಹಸಿರಿನ ಸಿದ್ಧತೆ ಕಾಣಬಹುದಾಗಿದೆ. "ಭೂಮಿಯ ಬೆನ್ನಿಗೆ ತಂಪನ್ನು ತಾಗಿಸಿ ಇಳಿದಿದೆ. ಹಸಿರೆಲೆ ರೇಖೆಗೆ ಮುದ್ದಿಸೂತ ಗಾಳಿ ತೊಟ್ಟಿಲ ಗೂಡಲಿ ಮಲಗಿದ್ದ ಮುದ್ದಿನ ಹಕ್ಕಿಯ ಮೊಗವನ್ನು ತೊಳೆಯೂತ, ಬಂದಿತು. ತುಂಬಿದ ಒಡಲಲಿ ಹೊಳೆಗಳ ಹರಿಸೂತ ಕೆರೆಕಟ್ಟೆಗಳ ಬಿರುಕನ್ನು ಮುಚ್ಚುತ ಪ್ರಕೃತಿ ಮುಡಿಗೆ ಮಲ್ಲಿಗೆ ಮುಡಿಸಿ ಸಾಗದೆ ಸಕಲಕೂ ನವಕವ ತುಂಬುತ ಬಂದಿತು ಬಂದಿತ್ತು".[3] ಹೀಗೆ ಮುಂಗಾರು ಮೋಡದ ಸಂಭ್ರಮ ಪ್ರಕೃತಿಯ ಹಸಿರಿನ ಕಂಪನವನ್ನು ಕಾಣಬಹುದಾಗಿದೆ. ಶಾಂತಾ ಕುಂಟಿನಿ (ಶಕುಂತಲಾ) ಅವರ 'ಮಳೆ' ಎಂಬ ಕವಿತೆ "ಹುಟ್ಟಿತಿಲ್ಲಿ ಪ್ರಕೃತಿ ಮಳೆಯಿಂದ, ಬೆಳೆಯಿತಿಲ್ಲಿ ಬೆಳೆ ಧರೆಯಿಂದ ಮಳೆ ಬಂದುದಾದರಲ್ಲಿಂದ ಮರಗಿಡಗಳ ಉಳಿವಿಂದ

ಕೆರೆಯ ನೀರನ್ನು ಕೆರೆಗೆ ಚೆಲ್ಲಿ, ಪ್ರಕೃತಿಯೊಳಗೆ ಬಂದು ನಿಲ್ಲಿ"[4] ಎಂಬ ವಿಷಯವು ತಿಳಿದು ಬರುತ್ತದೆ.

**ಮಲೆನಾಡ ಸಿರಿ:**

ಮಲೆನಾಡಿನಲ್ಲಿ ಸಾಲಾದ ಮರಗಳು ಅಡಿಕೆಯ ತೋಟ ಪ್ರತಿದಿನವು ಅನುರಾಗದ ಹಚ್ಚಹಸಿರಿನ ಮೈದೋಟದಂತೆ ಇರುತ್ತದೆ. ಆದ್ದರಿಂದ ಮಲೆನಾಡ ಸಿರಿಯನ್ನು ಕುರಿತು ಕವನವನ್ನು ಬರೆಯುವ ಎಂದು ಕವಿ ಶ್ರೀಶೈಲ ಬಿರಾದಾರ ಹೇಳುತ್ತಾರೆ. ಆಗುಂಬೆಯ ಮಂಜು ಮನವು ಕುಣಿಸಿದೆ ಎಡಬಿಡದೆ ಬೆಟ್ಟಗುಡ್ಡಗಳು, ಗಿಡಮರಗಳು, ಬೆಳೆದು ನಿಂತಿವೆ. ಮೋಡಗಳನ್ನು ತಡೆದು ನಿಂತು ಧಾರಾಕಾರವಾಗಿ ಮಳೆಯು ಸುರಿದರೆ ಅದ್ಭುತವಾದ ದೃಶ್ಯವಾಗಿದೆ. ನೀಲಗಿರಿಯ ಮರಗಳು ಪರಿಸರದ ಸೌಂದರ್ಯದ ರಮಣೀಯತೆಯು ಭೂಮಿಗೆ ಪರಿಸರದ ಹಸಿರಿನಿಂದ ಅಲಂಕಾರ ಮಾಡಿದಂತೆ ಕಂಡು ಬರುತ್ತದೆ. "ನೀಲಗಿರಿಯ ಮರಗಳೆಲ್ಲ ಚುಂಬನವಿತ್ತಂತೆ ರವಿ–ಚಂದ್ರರಿಗೆ, ಸ್ವರ್ಗ ಭುವಿಯು ಒಂದಾದಂತೆ ಕಣ್ಣು ಪುಳಕಿತಗೊಂಡು ಮನವು ಕುಣಿದಾಡಿದೆ. ಯಾರೇನೆ ಎಂದರು ಇದು ಸುಂದರ ವಿಹಂಗಮ ನೋಟ ಕಾಣಲು ಇದು ಶಿವನ ಕೈಲಾಸ, ಇಲ್ಲಿದ್ದರೆ ಮನಕೆ ಉಲ್ಲಾಸ ಎಷ್ಟು ಹೊಗಳಿದರು ಪದಗಳೆ ಸಾಲುತಿಲ್ಲ ಇನ್ನೊಮ್ಮೆ ಹುಟ್ಟಿಬರುವ ಈ ಕರುನಾಡ ತೊಟ್ಟಿಲಲ್ಲಿ".[5]

**ಗೂಡು ಕಟ್ಟಬೇಕು:**

ಕಾಲಕ್ಕೆ ತಕ್ಕಂತೆ ಪರಿಸರದಲ್ಲಿ ಪಕ್ಷಿಗಳು, ಪ್ರಾಣಿಗಳು ಮತ್ತು ಮನುಷ್ಯರು ಗೂಡು ಕಟ್ಟುವುದು, ಮನೆ ಕಟ್ಟುವುದು, ಜೀವನಕ್ಕೆ ಭದ್ರತೆಗೆ ತಕ್ಕಂತೆ ಬದುಕುವರು. ಹಾಗೆನೆ ಗೂಡಿನಲ್ಲಿ ಹೊಟ್ಟೆಯ ಒಳಗಿನಿಂದ ಬಂದ ತತ್ತಿಗಳು ಒಂದಕ್ಕೊಂದು ಡಿಕ್ಕಿ ಹೊಡೆಯುತ್ತಿವೆ. ಈಗ ಗೂಡು ಕಟ್ಟಬೇಕು. ಆಡು ಆಡುತ್ತಾ ಬೆಟ್ಟದ ತುದಿಯನ್ನು ಏರಿ ಬಂದು ಇಷ್ಟು ಕಡಿದಾದುದು ಎಂದು ಈಗ ಅನ್ನಿಸಬೇಕೆ? ಎಂದು ಪಕ್ಷಿಗಳು ಮನಸ್ಸಿನಲ್ಲಿ ಮನನವಾಗುತ್ತಿರುವ ಬಗೆಯನ್ನು ಕಾಣಬಹುದಾಗಿದೆ. ಅದಕ್ಕೆ ನಮ್ಮದೊಂದು ಗೂಡು ಕಟ್ಟಬೇಕು. ಬದುಕಲು ಜೀವವು ಉಳಿಯಲು ನೆಮ್ಮದಿಯ ಬಾಳ್ವೆಗೆ ಗೂಡು ಕಟ್ಟಬೇಕು ಎಂಬ ಹಂಬಲ ಕವಿಯೂ ಹಾರನಹಳ್ಳಿ ಮಳಲಿಗೌಡ ತಮ್ಮ ಕವಿತೆಯಲ್ಲಿ ವಿವರಿಸಿದ್ದಾರೆ. "ಇಲ್ಲಿ ಬಂದಿದ್ದೇವೆ ನಾವು ಅದಕ್ಕೆ ನಮ್ಮದೊಂದು ಗೂಡುಕಟ್ಟಬೇಕು ಕಳೆದ ಬಾಳ ಎಲೆಗಳಲ್ಲಿ, ನವೆದ ಸೀರೆ ಎಳೆಗಳಲ್ಲಿ, ಬೆಳೆಯುತ್ತಿರುವ ಮಳೆಯ ಒಳಗೆ, ಹೊಸ ಸೃಷ್ಟಿಯೂ ಬರುವವರೆಗೆ ನಿಲ್ಲುವಂತೆ ಗೂಡು ಕಟ್ಟಬೇಕು. ಋತುಮಾನಗಳಬ್ಬರಕ್ಕೂ ಹರಿವ ಹಾವ ಭೋಜನಕ್ಕೂ, ಬೇಟೆಗಾರನ ಬಾಯ ಚಪಲಕ್ಕೂ, ದಕ್ಕದಂತೆ ಗೂಡು ಕಟ್ಟಬೇಕು".[6] ಹೀಗೆ ಬದುಕಿನಲ್ಲಿ ಪರಿಸರದಲ್ಲಿ ಸುರಕ್ಷತೆಗಾಗಿ ಗೂಡು ಕಟ್ಟಬೇಕು ಶಾಂತಿಯಿಂದ ಇರಲು ಎಂಬ ಅಂಶವಿದೆ.

ಶಿವರಾಜ ಮೋತಿಯವರು ಸಂಗ್ರಹಿಸಿದ 'ರವಿಯ ಕವಿತೆಗಳು' ಎಂಬ ಕವನ ಸಂಕಲನದಲ್ಲಿ 'ಏಕಾಂತ' ಎಂಬ ಕಾವ್ಯದಲ್ಲಿ ಇರುವ ಭಾವನೆಗಳು ಅರಿಯಬಹುದಾಗಿದೆ.

“ಕಾಡೋ ಏಕಾಂತಕ್ಕೆ ಎದುರಿಗೆ ನೀ ಇರಬೇಕಿತ್ತು. ದಿನಕ್ಕಿಂತ ಹೆಚ್ಚೇ ನೆನಪಾಗ್ತಿದ್ದೀಯಾ ಮನದೂರಿನಲ್ಲಿ ಬಳಗದ ಗಿಡಮರದೆಲೆಗಳಿಗೂ ವಸಂತಸ ಆಸೆಯಾಗಿದೆ ನೀ ಬಂದು ಒಲವನ್ನು ಚಿಗುರಿಸಿ ಬಿರುಬಿಸಿಲ ಬೇಸಿಗೆಗೆ ಬೆಂದೊಡಲಿಗೆ ನೀ ಒಲವನ್ನೆರೆದು ಬದುಕಿಸು”.[7] ಹೀಗೆ ಬದುಕಿನಲ್ಲಿ ಜೀವಿಸುವ ಆಕಾಂಕ್ಷೆಯನ್ನು ನೋಡಬಹುದು.

**ಸುನಾಮಿ:**

ಪರಿಸರದ ವಿಕೋಪದಿಂದ ಸುನಾಮಿಯು ಬಂದು ಅಪ್ಪಳಿಸಿತು. ಜೀವ ಸಂಕುಲವೆಲ್ಲ ತತ್ತರಿಸಿ ಹೋಯಿತು. ಇದು ಸುನಾಮಿ ದುಃಖಾಮಿ, ಸುನಾಮಿ ಸ್ಮಶಾನವಾಗಿ ಹೋಯಿತು. ಸಮುದ್ರತೀರದ ಕಡಲತೀರದ ಕಡಲು ಅಂಗಳದಲ್ಲಿ ರುದ್ರನರ್ತನ ನೀರಿನ ವಿರಾಟ್ ಸ್ವರೂಪದ ದರ್ಶನವಾಯಿತು. ಬದುಕಿ ಬಾಳಲು ಬಿಡು ಎಂಬ ಮೊದಲನೆಯ ನಿವೇದನೆಯು ಇದೆ. “ಸೂಚನೆಗಳಿಲ್ಲದೆ ಸುವೇಗದಲ್ಲಿ ಸೂರ್ಯನೊಂದಿಗೆ ಬೆಳಗುತ್ತಲೆ. ಭೋರ್ಗರೆಯುತ ತೀರದಲ್ಲೆಲ್ಲ ತಿರುಕನಂತೆ ತಿರುಗಾಡಿ ರಾಕ್ಷಸನಂತೆ ದೂರ ತೀರವನ್ನು. ನುಂಗಲಾರದ ಸುನಾಮಿಯನ್ನು ‘ಸುನಾಮಿ’ ಎಂದು ಕರೆದರೂ ತಪ್ಪೆನಿಲ್ಲ. ಅಲೆಗಳಲ್ಲಿ ಬಲೆಗಳಾಗಿ ತೆರೆಯ ತೊರೆಯ ನೊರೆಯಂತೆ, ಗೋಪುರವನ್ನೆ ಮುಚ್ಚಿಸುವ ನೀರು ಕಡಲಾಳದಿಂದ ಒಡಲುಕ್ಕಿ ಬಂದು ತೀರದ ಅಂಗಳದಲ್ಲಿ ರೌದ್ರ ನರ್ತನ ಮಾಡಿ ರೌದ್ರಾವೇಶದಿ ಓಡಾಡಿದರೂ ಅಳಿದುಳಿದ ಜೀವಿಗಳನ್ನು ಕ್ಷಮಿಸು. ನಾವಿನ್ನು ಬದುಕುವೆವು. ನಿನ್ನ ನಮಿಸಿ ಓ ಗಂಗೆ ಧರಿತ್ರಿಯೆ ಈ ನಿನ್ನ ಕುಡಿಗಳ, ಬಾಳಿ ಬದುಕಲು ಬಿಡು”.[8] ಹೀಗೆ ಕವಿ ಎಮ್.ಕೆ.ಶೇಖ್ (ಮೌ. ಕು.ಶೇ) ಅವರು ಪರಿಸರದ ವಿಕೋಪದ ಸುನಾಮಿಯಿಂದಾದ ಪರಿಣಾಮ ಕುರಿತು ತಿಳಿಸಿದ್ದಾರೆ.

**ಪರಿಸರ:**

ಪರಿಸರವು ಸೃಷ್ಟಿಯ ಅದ್ಭುತವಾದ ಪ್ರಕ್ರಿಯೆಯಾಗಿದೆ. ಈ ಕಾಡುಗಳಲ್ಲಿ ಮರಗಳು, ಕುರುಹುಗಳು, ಪುಷ್ಪಗಳು ಮಾಯವಾಗುವ ಮುಂಚೆ ನೋಡು ನೀನು, ಈ ಕಾನನದ ತಿರುಕುಗಳೂ ಮಾಯವಾಗುವ ಮುನ್ನ ನೋಡು ಎಂಬ ಸೂಚನೆ ಕವಿ ಪ್ರೇಮ್ ದೇವ್ ದಿಲೀಪ್ ಅವರದಾಗಿದೆ. ಕವಿಯ ಕಾನನದ ಕವಿತೆಗಳು ಪ್ರಕೃತಿ ಮಾತೆಯ ಕರುಣೆಯನ್ನು ಕಾಪಾಡಿಕೊಳ್ಳುವಂತೆ ಇರುವ ಸಂದೇಶವನ್ನು ತಿಳಿಯಬಹುದಾಗಿದೆ. “ಪರಿಸರ– ಈ ಕಾಡುಗಳು, ಮರಗಳು ಮಾಯವಾಗುವ ಮುಂಚೆ ನೋಡು ನೀನು”. ಈ ಪರಿಸರದ ಪುಷ್ಪವೂ ಮಾಯವಾದ ಮುಂಚೆ ಪರಿಮಳಿಸು, ಈ ಅರಣ್ಯದ ಅಂದವೂ ಮಾಯವಾಗುವ ಮುಂಚೆ ಅರಿಯು ನೀನು, ಈ ವಾತದ ವಾಸನೆಯೂ ಮಾಯವಾಗುವ ಮುಂಚೆ ವಹಿಸು ನೀನು, ಈ ಗಿಡಗಳ ಗೆಳೆಯನೂ ಮಾಯವಾಗುವ ಮುಂಚೆ ಗುಣಿಸು ನೀನು, ಈ ಕಾನನ ಕವಿಗಳ ಹಾಡುಗಳೂ ಮಾಯವಾಗುವ ಮುಂಚೆ ಒಮ್ಮೆ ಕೇಳು, ಈ ಕಾಡಿನ ಪರಿಸರ ದೇವತೆಯ ಕರುಣೆಯ ತೋರಿಸಿ ಕಾಪಾಡಿ ಎಂಬ ವಿಷಯವನ್ನು ಕವಿ ಪ್ರೇಮ್ ದೇವ್ ದಿಲೀಪ್ ಅವರು ತುಂಬಾ ಚೆನ್ನಾಗಿ ವಿವರಿಸಿದ್ದಾರೆ. ಪರಿಸರ, ಕಾನನ, ಪುಷ್ಪ,

ಗಿಡಮರಗಳು, ಕವಿಗಳ ಹಾಡು ಇನ್ನೂ ಹಲವಾರು ಚಿಂತನೆಗಳನ್ನು ಒಳಗೊಂಡಿದೆ ಈ ಕವಿತೆ.

ಕವಿಯಿತ್ರಿ ಅಶ್ವಿನಿ ಡಿ.ಎನ್. ಅವರ 'ರವಿ ಬಂದಿಹನು' ಕಾವ್ಯ ಅರ್ಥಪೂರ್ಣವಾಗಿವೆ. "ಇಬ್ಬನಿಯ ಹೊಳಸೂತ ಚಂದಿರನ ಮರೆಮಾಚುತ ಬಾನಿಗೆಲ್ಲಾ ಬಂಗಾರದ ಬಣ್ಣವೀಯುತ, ರವಿ ಬಂದಿಹನು ನಮ್ಮೂರಿಗೆ ಬೆಳಕು ಚೆಲ್ಲಲು ಜೀವನದ ಗಳಿಗೆ ಚೈತನ್ಯ ನೀಡುವ ಮಂದಿ ಮನಸ್ಸುಗಳಿಗೆ ಪ್ರಫುಲ್ಲತೆಯ ಗೈಯುತ ರವಿ ಬಂದಿಹನು ನಮ್ಮೂರಿಗೆ ಬೆಳಕು ಚೆಲ್ಲಲು ರಸ್ತೆಗುಂಟ ಹರಿಸುತಿಹನು, ಬೆಳಕಿನೋಕುಳಿ, ಗಿಡಮರಗಳಿಗೆ ನೀಡುತಿಹನು, ಕಿರಣಗಳ ಕಚಗೂಳಿ, ರವಿ ಬಂದಿಹನು ನಮ್ಮೂರಿಗೆ ಬೆಳಕ ಚೆಲ್ಲಲು".[9] ಪರಿಸರದಲ್ಲಿ ಹಸಿರು ಆಗಿರಲು ರವಿಯೂ ಬರುವುದು ಸಹಜವಾದ ಕ್ರಿಯೆ ಎಂಬುದನ್ನು ತಮ್ಮ ಕಾವ್ಯದಲ್ಲಿ ವಿಭಿನ್ನ ನೆಲೆಯಲ್ಲಿ ರಚಿಸಿ ವಿವರಿಸಿದ್ದಾರೆ.

**ಪ್ರಕೃತಿ ಮಾತೆಯ ಸೊಬಗು:**

ಮೂಡಣದ ದಿಕ್ಕಿನಿಂದ ದಿನಕರನ ಉದಯದೊಂದಿಗೆ ಹಕ್ಕಿಗಳ ಧ್ವನಿಯ ಇಂಚರ ಮೊಳಗುವುದು. ಈ ಲೋಕವೆಲ್ಲಾ ನಾದಮಯದ ಸಂದೇಶ ಸುಮಗಳ ಮೇಲೆ ಮೊಗವು ಅರಳಿದಂತೆ, ಸೂರ್ಯನ ಕಿರಣಗಳ ನರ್ತನವು ಇರುತ್ತದೆ. ಬೀಸುವ ವಾಯುವಿನ ತಾಳಕೆ ತಲೆದೂಗುವ ತರು-ಲತೆಗಳ ಚೆಲುವು ಸೌಂದರ್ಯದ ಗಣಿಯಾಗಿದೆ. ಕವಿಯಿತ್ರಿ ರೂಪಶ್ರೀ ಕನ್ಯಾನ ಅದನ್ನು ಹೇಗೆ ವರ್ಣಿಸಲು ಪ್ರಕೃತಿಯ ಮಾತೆಯ ಸೊಬಗು ಎಂದು ತಿಳಿಸುತ್ತಾರೆ. ಮಧುರ ವಾಣಿಯ ಕೋಗಿಲೆಯ ಇಂಪು ಕಂಪು ಹಸಿರು ಗಿಡಗಳ ಮೇಲೆ ಅರಳಿದ ಹೂಗಳು ಬರೆದಂತೆ ಚಿತ್ತಾರ ಕಣ್ಣಿಗೆ ತಂಪು ಮಾಡಿಸುತ್ತದೆ.

ಪ್ರಕೃತಿ ಮಾತೆಯ ಅಲಂಕಾರ ಅದ್ಭುತವಾಗಿದೆ, ಹಸಿರು ಸೀರೆಯನ್ನು ತೊಟ್ಟು ಹೂಗಳನ್ನು ಮುಡಿದಿಟ್ಟುಕೊಂಡು ಕಂಗೊಳಿಸುತ್ತಿಹಳು ನಮ್ಮಿ ಭೂರಮೆ. ಪ್ರಕೃತಿ ಮಾತೆಯ ಸೊಬಗಿನಂದಕೆ ಸರಿಸಾಟಿ ಅಲ್ಲವೇ ಅಲ್ಲ. ಆ ಸ್ವರ್ಗ ಲೋಕದ ರಂಭೆ ಎಂದು ಕವಿಯಿತ್ರಿ ವಿವರಿಸುತ್ತಾರೆ. ಸೂರ್ಯ, ಚಂದ್ರರೆ ಪ್ರಕೃತಿ ಮಾತೆಯ ಕಣ್ಣುಗಳು. ನಕ್ಷತ್ರಗಳೇ ಆಕೆಯ ಕಿರೀಟದ ಮಣಿಗಳು ಸೊಗಸಾಗಿರುವ ಪ್ರಕೃತಿ ಮಾತೆಯ ಕಣ್ಣುಗಳು. ನಕ್ಷತ್ರಗಳೇ ಆಕೆಯ ಕಿರೀಟದ ಮಣಿಗಳು ಸೊಗಸಾಗಿರುವ ಪ್ರಕೃತಿ ಮಾತೆಯ ಸಿರಿ ಕವಿಯ ವರ್ಣನೆಗೆ ಸಿಗದ ಐಸಿರಿಯಾಗಿದೆ ಎಂಬ ಅಭಿಪ್ರಾಯವಿದೆ.

**ಪ್ರಕೃತಿಯ ಮಡಿಲು:**

ನಭದೊಳು ತಿಳಿನೀರು ಬಣ್ಣದಲ್ಲಿ ಕಾರ್ಮೋಡಗಳು ಸಂದೇಶ ತರುವ ತೋರಣವಾಗಿವೆ. ಬೆಟ್ಟ ಗುಡ್ಡಗಳ ಚಾರಣ ಮಾಡಲು ಕೈಬೀಸಿ ಕರೆಯುತ್ತಿವೆ. ಚಲನೆಯು ಪ್ರಕೃತಿಯ ನಿಯಮವಾಗಿದೆ. ಪ್ರಕೃತಿಯ ಸೊಬಗನ್ನು ಕಾಣಲು ಮನಸ್ಸಿಗೆ ಸಂತಸದ ಹೊನಲು ಆಗಿದೆ. ನಿಸರ್ಗದಲ್ಲಿ ಬೆಳೆದ ಗಿಡಮರಗಳ ಸಾಲು ಮನದಲ್ಲಿ

ಆನಂದವನ್ನು ನೆಲೆಸಲು ಸ್ಫೂರ್ತಿಯ ಕಾರಣವಾಗಿದೆ. ಸೂರ್ಯನ ದಿವ್ಯ ತೇಜವೋ ಹಕ್ಕಿಗಳ ಚಿಲಿಪಿಲಿ ಗಾನವೋ ಕಂಗು ತೆಂಗಿನಾ ಶೋಭೆಯೋ, ಚೈತನ್ಯವೋ ಚಿಲುಮೆಯ ಆಕಾಂಕ್ಷೆಯೋ ಎಂದು ಕವಯಿತ್ರಿ ಸುಭಾಷಿಣಿ ಚಂದ್ರ, ಕಾಸರಗೋಡು ಅವರು ಪ್ರಕೃತಿಯ ವಿಸ್ಮಯತೆಯನ್ನು ಕುರಿತು ಹೇಳುತ್ತಾರೆ. ತಣ್ಣನೆಯ ಗಾಳಿಯ ಸ್ಪರ್ಶ ಕಂಗಳು ಮುಚ್ಚದೆ ಒಡಲಿನಲ್ಲಿ ನೋಡಲು ತುಂಬಾ ಆನಂದದ ಭಾವನೆಗಳು ಮೂಡುತ್ತವೆ ಎಂಬ ಆಶಯವಿದೆ. ಹಸಿರು ಗಿಡ ಮರಗಳ ಅಂದ ಚಂದ ಪ್ರಕೃತಿ ಮಾತೆಯ ರಮ್ಯತೆಯ ವರ್ಣನೆಯಿದೆ.

ಗೋಪಾಲ ಕೃಷ್ಣ ಅಡಿಗರ 'ಭೂಮಿಗೀತೆ' ಎಂಬ ಕಾವ್ಯದಲ್ಲಿ 'ಹುಟ್ಟು' ಕುರಿತು ಕಾಣಬಹುದಾಗಿದೆ. "ಹುಟ್ಟು"–"ಮಲೆಘಟ್ಟ ಸೋಪಾನ ಕೆಳ ಪಟ್ಟಿಯಲ್ಲಿ ಉರುಳು, ಮೂರೇ ಉರುಳು–ಕಡಲ ಕುದಿತದ ಎಣೆ ಕೊಪ್ಪರಿಗೆಗೆ. ತೆಂಗು ಗರಿಗಳ ಬೀಸಿ ಕೈಚಾಚಿ ಕರೆದಳು. ಅಡಿಕೆಗೊನೆ ಗಿಲಕಿ ಹಿಡಿದಾಡಿಸಿದಳು. ಕಬ್ಬಿನಾಲೆಯ ತಿರುಪಿನಲ್ಲಿ ಕುಳಿತೆರೆದಳು. ಅಜಸ್ರಧಾರೆಯ ಕರುಳು ತುಡಿತವನ್ನು. ಭತ್ತ, ಗೋಧಿ, ರಾಗಿ, ಜೋಳ, ಮೊರ ಮೊರ ಮೌರಿಯಲ್ಲಿ, ಮಾಂಸದ ಹಾಡಿ ನೋಡಿಸಿದಳು. ಗಂಟೆ ಗೋರಟೆ ಹಕ್ಕಿಗೊರಳಿಂದಾಗುವ, ತುಂಬಿ ಮರ್ಮರ ಮೊರೆವ ಜಾಮೂನುನಾದದಲಿ ಜಾಳಿಸಿದಳು. ಆಕಾಶದಲ್ಲಿ ನೋಡದ ವಿಶ್ವರೂಪಕ್ಕೆ ಕೆಳಗೆ ಜೀವಜ್ಯೋತಿ ಕೊಡಿಸಿದಳು".[10] ಹೀಗೆ ಭೂಮಿಗೀತೆಯ ಕಾವ್ಯದಲ್ಲಿ ಹುಟ್ಟು ಎಳೆಯ ಹರೆಯ ಮೈಯಭಾರ, ಮನವೇ ಭಾರ ಎಂಬ ಅಂಶಗಳು ಕಂಡು ಬರುತ್ತವೆ.

**ಪ್ರಕೃತಿಯ ಬಳಿ:**

ಪರಿಸರ ಮಾತೆ ನೆರಳ ಬಯಸಿ ಬಂದೆ, ಉರಿಯುವ ಬಿಸಿಲಲ್ಲಿ ಬೆಂದೆ ಎಲೆಯಿಲ್ಲದ ಸಸಿಮರಗಳನ್ನು ಕಂಡು ಸಿಗದಂತಾಗಿದೆ. ಶಾಂತಿಯ ನೆಮ್ಮದಿ ತಂಪು ದಯೆ ತೋರೆ ಎಂಬೆ ಎಂಬ ವಿನಂತಿ ಕವಿ ಗಿರೀಶ್ ದೇವಪುರದವರದಾಗಿದೆ. ಮನಸ್ಸಿನಲ್ಲಿ ಹೊನ್ನ ಸಂಜೆಯಾದರೂ ತಂಪಿಲ್ಲ ಸೂರ್ಯನನ್ನು ದೂರುವೇಕೆ. ದಾಹದಿಂದ ಬಾಯಾರಿಕೆ ಆದರೂ ನೀರಿಲ್ಲ, ದೂಷಿಸುವೇಕೆ ಭೂಮಿತಾಯಿಗೆ. ಉತ್ತಮ ಆರೋಗ್ಯಬೇಕೆಂದರು ಗಾಳಿಯೂ ಇಲ್ಲ ಮುನಿಸುವೆ ಏಕೆ ನನಗೆ ಎಂಬ ಪ್ರಶ್ನೆಗಳನ್ನು ಸಾಂತ್ವನ ಇರುವಂತೆ ಇದೆ. ಮನವೇ ಸಸಿಯು ತರುವ ನಿಜವಾದ ಪರಿಸರ ಹಸಿರು ಪ್ರಕೃತಿಯ ಸ್ವಾಗತಿಸುವ ನಮ್ಮ ಬಾಳ ಸಂಸ್ಕೃತಿಯ ಸಂದೇಶವಾಗಿದೆ. ನದಿಯ ತೀರದಲ್ಲಿ ಜಲದ ಜುಳಜುಳ ಶಬ್ಧ ಹಕ್ಕಿಗಳ ಇಂಚರ ನೋಡಿ ತಲ್ಲಣವಾಯಿತು ಮನವು ಹಸಿರು ಬನಸಿರಿಯ ಕಾಡು ಸುಂದರವಾಗಿದೆ. ಪ್ರಕೃತಿ ಮಾತೆಯ ಹಚ್ಚಹಸಿರು ಕೈಬಳೆ ಸುರಿದಂತಾಗುವುದು. ಸದಾ ಮುಂಗಾರು ಮಳೆ ಮಂದಹಾಸದಿಂದ ಭೂಮಿತಾಯಿ ನಕ್ಕಳೆಂದರೆ ಝೇಂಕರಿಸಿ ಹರಿಯುವುದು ಜೋಗ ಜಲಪಾತ ಭೂಮಿಯೇ ಸ್ವರ್ಗವಾಗಿ ಯೋಗ ದೊರೆಯುವುದು ಎಂದು ಕವಿಯ ಆಶಯವಾಗಿದೆ.

**ನಮ್ಮ ಪರಿಸರ:**

ಪರಿಸರ ಎಷ್ಟೊಂದು ಚಂದದ ಪರಿಸರ ಹಚ್ಚಹಸಿರಿನ ಪರಿಸರವನ್ನು ನಾವು ಉಳಿಸೋಣ ಬನ್ನಿ ಗೆಳೆಯರೆ ಎಂದು ಕವಿ ಕೌಶೀಲ ತಿಳಿಸುತ್ತಾರೆ. ಸ್ಲೋಗನ್‌ಗಳನ್ನು ಜಪಿಸೋಣ ಅದರ ನಿಜವಾದ ಅರ್ಥವನ್ನು ಲೋಕಕ್ಕೆ ಸಾರೋಣ ಎಂಬರ್ಥವಿದೆ. ಕಾಡನ್ನು ಬೆಳೆಸಿರಿ. ನಾಡನ್ನು ಉಳಿಸಿರಿ. ಹಸಿರ ಸೊಬಗನ್ನು ಸಂರಕ್ಷಿಸಿರಿ ಸ್ವಚ್ಛ ಉಸಿರನ್ನು ಆಸ್ವಾದಿಸಿರಿ ಇದರ ಮಹತ್ವವಾದ ಸಂದೇಶವನ್ನು ಹಲವು ಉಪಯೋಗವನ್ನು ತಿಳಿಸುತ್ತವೆ. ಗಾಳಿ, ನೀರು, ಪರಿಸರದ ಸ್ವಚ್ಛತೆಯ ಮಹತ್ವವನ್ನು ತಿಳಿಯೋಣ. ನಮ್ಮ ಭೂಮಿಗೆ ನಮ್ಮದೇ ಆದ ಉಡುಗೊರೆ ನೀಡೋಣ. ಗಿಡವನ್ನು ನೆಟ್ಟು ಜೀವನ ಸಾರ್ಥಕಗೊಳಿಸೋಣ ಅದರ ಲಾಲನೆ-ಪಾಲನೆ ಮಾಡುತ್ತಾ ನಾವು ಜೀವಿಸೋಣ ಎಂಬ ವಿನಂತಿ ಇದೆ. ಪರಿಸರ ಸಂರಕ್ಷಣೆಯೊಂದಿಗೆ ಬನ್ನಿ ಭಾರತ ಮಾತೆಯ ಮಕ್ಕಳೇ, ಸುಂದರವಾದ ಬದುಕನ್ನು ಬದುಕೋಣ. ನಮ್ಮ ಪರಿಸರವನ್ನು ಉಳಿಸೋಣ ಮತ್ತು ಬೆಳೆಸೋಣ. ಹಸಿರು ಕಾಪಾಡೋಣ ಎಂಬುದು ಮಹತ್ವವಾಗಿದೆ.

ಚನ್ನವೀರ ಕಣವಿಯವರ ಕವಿತೆ. "ನಗರದಲ್ಲಿ ನೆರಳು". "ಮಟಮಟ ಮಧ್ಯಾಹ್ನದಲ್ಲಿ, ನೆರಳು ಹುಡುಕುತ್ತಾ ಹೊರಟಿದ್ದೇನೆ. ಅಲ್ಲಲ್ಲಿ ತೋಟದ ತುಂಬ ಬಾಬ ಕಟ್ ಮಾಡಿದ, ಆದರೂ ಹೂ ಮೂಡಿದ ನಾನಾ ನಮೂನೆಯ ಕಮಾನಿನ ಗಿಡ ಬಳ್ಳಿಗಳು, ನೆಲಕ್ಕೆ ತೂತು ಹತ್ತಿದ ಹಾಗೆ ನೆರಳು, ಉದ್ದಕ್ಕೂ ಚುರುಗುಡುತ್ತಿರುವ ಟಾರು ರೋಡು. ಅದಕ್ಕೂ ಮೂಡುತ್ತವೆ ನೂರೆಂಟು ಕೋಡು. ಹಾಯಿಸಿಕೊಂಡು, ದಬಾಯಿಸಿಕೊಂಡು, ನಿಭಾಯಿಸಿಕೊಳ್ಳುವುದೇ ನೆಟ್ಟಗೆ ದಾರಿ ಹಿಡಿದವರ ಪಾಡು. ಸಣ್ಣವನಿದ್ದಾಗ ನಮ್ಮೂರಾಗ ಹೊರಗಿನ ಆಲದ ಮರದ ದಟ್ಟ ನೆರಳಲ್ಲಿ, ಗೋಲಿಯಾಡಿ, ಬೆರಳಿಗೆ ನೆತ್ತರು ಬರುವಂತೆ ಡೀಕಿ ಡಿಕ್ಕಿಸಿ ಒಬ್ಬರಿಗೊಬ್ಬರು ತೆಕ್ಕಿಬಿದ್ದು, ಅಂಗಿ ಹರಿದು ಹತ್ತಿದ್ದು, ಮತ್ತೆ ನಕ್ಕಿದ್ದು, ಸಂತೋಷ ಉಕ್ಕಿದ್ದು ನೆನಪಾಗುತ್ತದೆ. ಈ ನಗರದ ಸುಡುವ, ಸುತ್ತು ಬಳಸುವ, ಕತ್ತು ಹೊರಳಿಸುವ, ಕುತ್ತು ಒಡ್ಡುವ ದಾರಿಯಲ್ಲಿ, ಹೀಗೆ ಮಂದಿಯ ನಡುವೆ ನೆರಳು ಹುಡುಕುತ್ತಾ ನಡೆಯುವಾಗ".[11] ಹೀಗೆ ಕವಿ ಚನ್ನವೀರ ಕಣವಿಯವರು ನಗರದ ಪರಿಸರ ವಿವರಿಸುವರು.

**ಪರಿಸರದ ಸೊಗಸು ಕವಿತೆ:**

ಚುಆಂಗ್ ಜು ಒಂದು ದಿನ ಮುಂಜಾನೆ ನದಿಯಲ್ಲಿ ಮೀನು ಹಿಡಿಯುತ್ತಿದ್ದನು. ಹಿಡಿದು ಆನಂದಿಸಿ ಮತ್ತೆ ಮೀನುಗಳನ್ನು ನದಿಗೆ ಬಿಡುತ್ತಿದ್ದನು. ರಾಜನ ಆಜ್ಞೆಯಂತೆ ಪ್ರಧಾನ ಮಂತ್ರಿಯಾಗುವ ಯೋಗ ಬಂದಿತು. ಅರಮನೆಯಲ್ಲಿರುವ ಆಮೆಗಳು ಏನು? ಅದಾವೊ ಎಂದು ರಾಜದೂತನಿಗೆ ಕೇಳಿದನು. ನಿರ್ಜೀವವಾಗಿವೆ ಎಂಬುದು ಉತ್ತರ ತಿಳಿಯಿತು. ಪರಿಸರದಲ್ಲಿ ಸ್ವತಂತ್ರವಾಗಿ ಇರಲು ಬಯಸುತ್ತೇನೆ. ಆ ಹುದ್ದೆಯನ್ನು ತಿರಸ್ಕರಿಸಿದನು. ಅದರ ಸಾರಾಂಶವೇ ಈ ಕವಿತೆಯ ಸಂಗ್ರಹದ ಅಂಶವಾಗಿದೆ. "ನಿಮ್ಮನ್ನು ಹುಡುಕುತ್ತಾ ಹುಡುಕುತ್ತಾ, ನಾನಿಲ್ಲಿಗೆ ಬಂದೆ, ನಿಮ್ಮನ್ನು ನಮ್ಮ ದೊರೆ, ಪ್ರಧಾನಿ ಪದಕೆ ಆಯ್ಕೆ ಮಾಡಿದ್ದಾರೆ. ಅರಮನೆಗೆ ನೀವು

ಬಿಜಯಂಗೈಯಬೇಕು". ಚುಆಂಗ್ ಜು ನಗು ನಗುತ್ತಾ ನುಡಿದನು: "ಕೇಳಿರುವೆ, ನಿಮ್ಮ ದೊರೆಯ ಸಂಗ್ರಹಾಲಯದಲ್ಲಿ, ಸಾಲು ಸಾಲಾಗಿ ನಿರ್ಜೀವ ಆಮೆಗಳ ಪ್ರದರ್ಶನಕ್ಕಿಟ್ಟಿರುವಂತೆ!. ಈಗ ನೀನೆ ಹೇಳು: ಅವು ಜೀವಂತವಿದ್ದುವಾದರೆ, ಅರಸನ ಅರಮನೆಯ ಶೋಭೆ ಹೆಚ್ಚಿಸಲು ಹಾತೋರೆಯುತ್ತಿದ್ದವೋ?". ತಟ್ಟನೆ ಮರುನುಡಿದ ರಾಜದೂತ. "ಅವು ಮರಳುತ್ತಿದ್ದವು ತಮ್ಮ ಮೂಲ ಪರಿಸರಕ್ಕೆ?". "ನನ್ನಾಸೆಯು ಅಷ್ಟೇ. ಅನಾಯಾಸ ದೊರೆತ ಪದವಿಗೇರಿದ ಮನುಜ ಕಳೆದುಕೊಳ್ಳುತ್ತಾನೆ. ತನ್ನ ಮನದ ಶಾಂತಿ ಮೇಲಿನಂತಸ್ತಕ್ಕೆ ಹೊಂದಿಕೊಳ್ಳದೇ ಸಹಜ. ಹೋಗಪ್ಪಾ ನಿನ್ನ ಸಾಮ್ರಾಟರಿಗೆ ಇಷ್ಟೇ ತಿಳಿಸು. ನನಗಿಷ್ಟ ಈ ನನ್ನ ಪರಿಸರದ ಸೊಗಸು".[12] ಹೀಗೆ ಪರಿಸರ, ಆಜ್ಞೆ, ಸ್ವತಂತ್ರ, ಮನಸ್ಸಿನ ಇಚ್ಛೆಯಂತೆ ವಿಷಯಗಳು ಕಂಡು ಬರುತ್ತವೆ.

ಚಂದ್ರಶೇಖರ ಪಾಟೀಲರ (ಚಂಪಾ). ಹೂವು ಹೆಣ್ಣು ತಾರೆ ಈ ಕವಿತೆಯು ಅದ್ಭುತವಾಗಿದೆ. "ನಾವು ಹೂವಿನ ಬಗ್ಗೆ, ನಾವು ಹೆಣ್ಣಿನ ಬಗ್ಗೆ, ತಾರೆಯ ಬಗ್ಗೆ, ಹಾಡುವುದು ಬೇಡ. ಅಂತ ಗೆಳೆಯ, ನಾವು ಹೇಳುವುದು ಬೇಡ. ನೆಲದ ಬಸಿರಿನ ಬಿಸಿಗೆ ಬೀರಿತ್ತು, ಒಡಲನೇ ಸೀಳಿ, ಹೊರ ಬಂದ ಜೀವ ರಸ, ಟೊಂಗೆ ಟೊಂಗೆಯ ತುದಿಗೆ, ಕಾರಂಜಿಯಾಗಿ ಅರಳುವ ಹೂವು. ಒಡಲ ನೆತ್ತರವನ್ನು ಕಣ್ಣಲ್ಲಿ ಚಿಮುಕಿಸಿ ಹೀಗೆ ಬದುಕಬೇಕು ನಾವು-ನೀವು. ಅದಕ್ಕೆ ಗೆಳೆಯ, ನಾವು ಹೂವಿನ ಬಗ್ಗೆ ಹಾಡುವುದು ಬೇಡ, ಅಂತ ಹೇಳುವುದು ಬೇಡ"[13]. ಹೀಗೆ ಪರಿಸರದಲ್ಲಿ ಕಂಡು ಬರುವ ಹೂವು, ಹೆಣ್ಣು, ತಾರೆ ಬದುಕಿನಲ್ಲಿ ಸಾಗಿ ಬಂದ ನೆಲೆಯನ್ನು ಒಳಗೊಂಡಿರುವ ಅರ್ಥವನ್ನು ಸಹ ತಿಳಿಯಬಹುದಾಗಿದೆ.

**ಉಪಸಂಹಾರ:**

ಒಟ್ಟಾರೆಯಾಗಿ ಕಾವ್ಯ ಸಾಹಿತ್ಯದಲ್ಲಿ ಪರಿಸರ, ಪ್ರಕೃತಿಯ ವಿಸ್ಮಯ, ಹಸಿರು ಕುರಿತಾದ ಹಲವಾರು ಅಂಶಗಳನ್ನು ಅಧ್ಯಯನದ ಮೂಲಕ ತಿಳಿಯಬಹುದಾಗಿದೆ. ಪರಿಸರದ ವಿವಿಧ ಸೌಂದರ್ಯದ ಮಜಲುಗಳನ್ನು ಕಾಣಬಹುದಾಗಿದೆ. ಪ್ರಕೃತಿಯ ಸೊಬಗಿನ ಭಿನ್ನಾಣ, ಮುಂಗಾರು ಮೋಡ, ಮಲೆನಾಡ ಸಿರಿ, ಗೂಡು ಕಟ್ಟಬೇಕು. ಪ್ರಕೃತಿ ಮಾತೆಯ ಸೊಬಗು. ಹೀಗೆ ಹಲವಾರು ಕಾವ್ಯಗಳಲ್ಲಿ ಅಭಿವ್ಯಕ್ತಿಗೊಂಡ ಚಿಂತನೆಗಳನ್ನು ಕಾಣಬಹುದಾಗಿದೆ.

ಪರಿಸರ, ಹಸಿರು, ಮಳೆ, ಸೂರ್ಯ, ಚಂದ್ರ, ಪ್ರಾಣಿಗಳು, ಪಕ್ಷಿಗಳು, ಸಸ್ಯಗಳು, ಜೀವಂತವಿರುವ ಜೀವ ಸಂಕುಲವು ಭೂಮಿಯಲ್ಲಿ ಪ್ರಕೃತಿಯಲ್ಲಿ ಬದುಕು ಬಾಳುವ ಪರಿಸ್ಥಿತಿಯನ್ನು ಕಾಣಬಹುದಾಗಿದೆ. ಇನ್ನೂ ಹಲವಾರು ವಿಷಯಗಳು, ಅಂಶಗಳು ವಿವಿಧ ವಲಯಗಳಿಂದ ಇರುವುದು ಕಂಡು ಬರುತ್ತದೆ.

**ಕೊನೆ ಟಿಪ್ಪಣಿಗಳು:**

1. ಡಾ.ಚಂದ್ರಮಾ ಎಸ್.ಕಣಗಲಿ, ಭಾವಾಂಜಲಿ, ಪು.ಸಂ.03.
2. ಶ್ರೀಶೈಲ ಮಲ್ಲನಗೌಡ ಬಿರಾದಾರ, ಕಾವ್ಯ ಶರದಿ, ಪು.ಸಂ.03.
3. ಕೆ.ಎಸ್.ಚಿದಾನಂದ, ಒಲವಿನ ಅಲೆಗಳು, ಪು.ಸಂ.48.
4. ಶಾಂತಾ ಕುಂಟಿನಿ (ಶಕುಂತಲಾ), ಸೂಕ್ಷ್ಮ ದೃಷ್ಟಿ ಪು.ಸಂ.18.
5. ಶ್ರೀಶೈಲ ಮಲ್ಲನಗೌಡ ಬಿರಾದಾರ, ಕಾವ್ಯ ಶರದಿ, ಪು.ಸಂ.25.
6. ಹಾರನಹಳ್ಳಿ ಮಳಲಿಗೌಡ, ಗೂಡು ಕಟ್ಟಬೇಕು, ಪು.ಸಂ.8–10.
7. ಶಿವರಾಜ ಮೋತಿ, ರವಿಯ ಕವಿತೆಗಳು, ಪು.ಸಂ.1.
8. ಎಮ್.ಕೆ.ಶೇಖ, (ಮೌ.ಕು.ಶೇ) ಭೂ ಮಾತೆ ನನ್ನ ಮಾತೆ, ಪು.ಸಂ.56.
9. ಅಶ್ವಿನಿ. ಡಿ.ಎನ್. ಮಾಸದ ಕಿರುನಗೆ, ಪು.ಸಂ.27–28.
10. ಸಂ ಪಿ.ಲಂಕೇಶ, ಅಕ್ಷರ ಹೊಸ ಕಾವ್ಯ, ಪು.ಸಂ.30–31.
11. ಸಂ ಡಾ.ಬಿ.ಜಿ. ಬಿರಾದಾರ. ಡಾ. ಎಸ್.ಬಿ.ಕರಿಬರಮಗೌಡರ, ಕನ್ನಡ ನವೋದಯ ಕಾವ್ಯ, ಪು.ಸಂ.11–12.
12. ಡಾ.ಬಿ.ಎ.ಸನದಿ, ಹೊಸ ಶಬ್ದದ ಸಂಸಾರ, ಪು.ಸಂ.29–30.
13. ಸಂ ಪಿ.ಲಂಕೇಶ, ಅಕ್ಷರ ಹೊಸ ಕಾವ್ಯ, ಪು.ಸಂ.280–281